**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :7 ಸಿಡಬ್ಲು :14

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಮಿಲನ ದೇವನ್ನವರ |
| ತಂದೆಯ ಹೆಸರು | : ಶ್ರೀ.ಬಾಬು ದೇವನ್ನವರ |
| ವಯಸ್ಸು | : 56 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 15-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 6 ರಿಂದ ಚಾಸಾಃ 11 ರವರ ಪರಿಚಯ ಇದೆ. ಎಲ್ಲಾ ಆರೋಪಿತರ ಪರಿಚಯ ಇರುತ್ತದೆ.

2. 2017 ರಲ್ಲಿ ಆರೋಪಿತರಿಗೂ ಮತ್ತು ನೇಮಿನಾಥ ಅವರಿಗೂ ಜಗಳ ಆಗಿತ್ತು. ನೇಮಿನಾಥ ಅವರ ಜಾಗದಲ್ಲಿ ಕಸ ಕೀಳುವ ಕೆಲಸಕ್ಕೆ ನಾನು ಮತ್ತು ಚಾಸಾಃ 15 ಮಲ್ಲು ಕುರಾಡೆ ಅವರು ಹೋಗಿದ್ದೇವು. ಆ ಜಾಗವನ್ನು ಆರೋಪಿತರು ನಮ್ಮ ಜಾಗ ಎಂದು ಹೇಳುತ್ತಿದ್ದರು, ನೇಮಿನಾಥ ಎನ್ನುವವರು ನಮ್ಮ ಜಾಗ ಎಂದು ಹೇಳುತ್ತಿದ್ದರು. ಚಾಸಾಃ 23 ಪ್ರಕಾಶ ಕಡಕೋಳ ಎನ್ನುವವರು ಮಣ್ಣಿನ ರಾಶಿ ಮೇಲೆ ನಿಂತಿದ್ದು ಜಾರಿ ಬಿದ್ದರು. ಮಾದರ ಸಮಾಜದವರು ಕಬ್ಬಿಣದ ರಾಡ್ ಮತ್ತು ಕಟ್ಟಿಗೆಯಿಂದ ನೇಮಿನಾಥ ಬಾಬನ್ನವರ, ಚಾಸಾಃ 4 ಶ್ರೀಕಾಂತ ಬಾಬನ್ನವರ, ರಾವಸಾಬ ಬಾಬನ್ನವರ, ಪೊನ್ನಂಜಿ, ಪ್ರಭು ಕುರಾಡೆ, ಮಲ್ಲು ಕುರಾಡೆ ಇವರುಗಳಿಗೆ ಹೊಡೆದರು. ನನಗೂ ಕಲ್ಲಿನಿಂದ ತಲೆಗೆ ಏಟು ಬಿತ್ತು. ತಲೆಯಲ್ಲಿ ರಕ್ತ

ಸುರಿಯುತ್ತಿತ್ತು, ನಾನು ಹಾಕಿಕೊಂಡ ಬಟ್ಟೆ ಮೇಲೆ ಸುರಿದಿತ್ತು. ಯಾರು ಹೊಡೆದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನನ್ನು ನಾರಗೊಂಡ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಯಿತು. ಆಸ್ಪತ್ರೆಗೆ ಪೋಲಿಸರು ಬಂದಿದ್ದರು, ಆಗ ರಕ್ತ ಆಗಿದ್ದ ಬಟ್ಟೆ ಯನ್ನು ನಾನು ಪೋಲಿಸರಿಗೆ ನೀಡಿದ್ದೇನೆ. ಪೋಲಿಸರು ಪಂಚನಾಮೆ ಮಾಡಿ ಬಟ್ಟೆಯನ್ನು ಜಪ್ತು ಮಾಡಿಕೊಂಡರು.

**ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

3. ಪಂಚನಾಮೆಯನ್ನು ನಿಪಿ–6 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–6 [ಎ] ಎಂದು ಗುರುತಿಸಲಾಯಿತು.

4. ನ್ಯಾಯಾಲಯದಲ್ಲಿ ಹಾಜರುಮಾಡಿರುವ ವಸ್ತುಗಳನ್ನು ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರವರು ಮನವಿಯನ್ನು ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಖಾಕಿ ಬಣ್ಣದ ಕವರಿನಿಂದ ಸುತ್ತಿರುವ ಹಾಗೂ ಪಂಚನಾಮೆ ಕಾಲದಲ್ಲಿ ಮಾಡಿರುವ ಸೀಲನ್ನು ಹಾಗೂ FSL ಸೀಲು ಇರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಬಿಳಿ ಬಣ್ಣದ ಪ್ಯಾಂಟನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು.

5. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಖಾಕಿ ಬಣ್ಣದ ಕವರಿನಿಂದ ಸುತ್ತಿರುವ ಹಾಗೂ ಪಂಚನಾಮೆ ಕಾಲದಲ್ಲಿ ಮಾಡಿರುವ ಸೀಲನ್ನು ಹಾಗೂ FSL ಸೀಲು ಇರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ನೀಲಿ, ಬಿಳಿ ಬಣ್ಣದ

ಚೌಕಾಕಾರದ ಡಿಸೈನ ಇರುವ ತುಂಬು ತೋಳಿನ ಶರ್ಟನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.10 ಎಂದು ಗುರುತಿಸಲಾಯಿತು.

6. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಂಬು ಬಡಿಗೆ, ಕಬ್ಬಿಣದ ರಾಡ್ ಮತ್ತು ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ.1 ರಿಂದ ಮು.ಮಾ.4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ದಿನಾಂಕಃ 14-10-2025 ರಂದು ಈ ಪ್ರಕರಣದ ಚಾಸಾಃ 1 ನೇಮೀನಾಥ ಬಾಬನ್ನ ಆರೋಪಿಯಾದ ಪ್ರಕರಣದಲ್ಲಿಯೂ ಸಹ ನಾನು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿ. ಮಾದರ ಜನಾಂಗ ಮತ್ತು ಜೈನ ಸಮುದಾಯದವರಿಗೆ ತಕರಾರು ಇರುವ ನಿವೇಶನದಲ್ಲಿ ನಾನು ಕೆಲಸಕ್ಕೆ ಹೋಗಿದ್ದೆ ಎನ್ನುವುದು ಸರಿ. ಬಾಬನ್ನವರ ಕುಟುಂಬ ಅಂದರೆ ಚಾಸಾಃ1 ರವರ ಕುಟುಂಬ ಮತ್ತು ಚಾಸಾಃ 15 ಮಲ್ಲು ಕುರಾಡೆ ಅವರ ಕುಟುಂಬದವರೊಂದಿಗೆ ನಾನು ವಿಶ್ವಾಸದಿಂದ ಇದ್ದೆ ಎನ್ನುವುದು ಸರಿ.

2. ಈ ಪ್ರಕರಣದಲ್ಲಿ ನನಗೆ ಗಾಯ ಆಗಿ ಚಿಕಿತ್ಸೆ ಪಡೆದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. " ದಿನಾಂಕಃ 29-08-2017 ರಂದು ನಾನು ಪೋಲಿಸರು ಮುಂದೆ ನೀಡಿದ ಹೇಳಿಕೆಯಲ್ಲಿ ಮೊನ್ನೆ ದಿನಾಂಕಃ 26-08-2017 ರಂದು ಮುಂಜಾನೆ 9:00ಗಂಟೆ ಸುಮಾರಿಗೆ 1) ನೇಮಿನಾಥ ಲಕ್ಷ್ಮಣ ಬಾಬನ್ನ, 2) ಶ್ರೀಕಾಂತ ಮಾರ್ತಾಂಡ ಬಾಬನ್ನ ಮತ್ತು ಬಾಬನ್ನ ಅವರ ಮನೆಯವರು ಕೂಡಿ ಮುಗಳಖೋಡ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ಇರುವ ಖುಲ್ಲಾ ಜಾಗೆಯಲ್ಲಿ ಈ ಮೊದಲು ಕಟ್ಟಡದ ಕೆಲಸ ನಿಂತಿದ್ದ ಸ್ಥಳದಲ್ಲಿ ಪುನಃ ಕಟ್ಟಡ ಕಟ್ಟುವ ಸಲುವಾಗಿ ಕೆಲಸ ಮಾಡಲು ನನಗೆ ಮತ್ತು ನಮ್ಮೂರ

ಮಲ್ಲು ಲಕ್ಷ್ಮಣ ಕುರಾಡೆ ಇವರಿಗೆ ಕೆಲಸಕ್ಕೆ ಕರೆದುಕೊಂಡು ಬಂದಿದ್ದರು, ಆಗ ಅದರ ಪೂಜೆ ಇದ್ದರಿಂದ ಅವರ ಸಂಬಂಧಿಕರಾದ ಬಾಹುಬಲಿ ಹುಲ್ಲೋಳ್ಳಿ ಮತ್ತು ಅವರ ಸಂಬಂಧಿಕರಿಗೆ ಕರೆಯಿಸಿದ್ದರು. ಅಲ್ಲಿ ಕಟ್ಟಡ ಪೂಜೆ ಮುಗಿದ ಬಳಿಕ ಖಾಲಿ ಜಾಗದಲ್ಲಿ ನಾವೆಲ್ಲ ಸ್ವಚ್ಚ ಮಾಡುತ್ತಿದ್ದೇವು, ಬೆಳಗ್ಗೆ 11:00 ಗಂಟೆ ಸುಮಾರಿಗೆ ಮಾದಿಗ ಸಮಾಜದ ಬಸಪ್ಪ ಯಮನಪ್ಪ ಮಾದರ ಅಲಿಯಾಸ ಬುರಡಿ ಹಾಗೂ ಇತರರು ಕೂಡಿಕೊಂಡು ನಮ್ಮೂರ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಮತ್ತು ಅಧ್ಯಕ್ಷರಿಗೆ ಕರೆದುಕೊಂಡು ಬಂದರು " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಡಿ-3 ಎಂದು ಗುರುತಿಸಲಾಯಿತು.

3. ಚಾಸಾಃ 1 ರವರ ಕುಟುಂಬ ಮತ್ತು ಚಾಸಾಃ 15 ರವರ ಕುಟುಂಬ ರಾಜಕೀಯವಾಗಿ ಪ್ರಭಾವನ್ನು ಮತ್ತು ಆಸ್ತಿಯನ್ನೂ ಸಹ ಹೊಂದಿದ್ದಾರೆ ಎನ್ನುವುದು ಸರಿ. ಮಾದರ ಸಮಾಜದವರು ದಿನಗೂಲಿ ಮಾಡಿಕೊಂಡು ವಿವಾದಿತ ಸ್ಥಳದಲ್ಲಿ ವಾಸ ಇದ್ದಾರೆ ಎನ್ನುವುದು ಸರಿ. 1ನೇ ಆರೋಪಿ ಮಾದರ ಸಮಾಜದವರ ಪರವಾಗಿ ಹೋರಾಟ ಮಾಡುತ್ತಾರೆ ಮತ್ತು ಕಷ್ಟ ಸುಖದಲ್ಲಿ ಭಾಗಿಯಾಗುತ್ತಾರೆ ಎನ್ನುವುದು ಗೊತ್ತಿಲ್ಲ. ನಾನೂ ಸಹ ಪರಿಶಿಷ್ಟ ಜಾತಿಯ ಸದಸ್ಯ ಎನ್ನುವುದು ಸರಿ.

4. ನಾನು ಮಾದರ ಸಮಾಜದ ಕೆಲವು ಸದಸ್ಯರನ್ನು ಮತ್ತು ಈ ಪ್ರಕರಣದ ಕೆಲವು ಆರೋಪಿತರನ್ನು ಸೇರಿಸಿಕೊಂಡು ಮಾದರ ಸಮಾಜಕ್ಕೆ ವಿರುದ್ಧವಾಗಿ ಈ ಪ್ರಕರಣದ ಚಾಸಾಃ 1 ರವರೊಂದಿಗೆ ಓಡಾಡುತ್ತೇನೆ ಮತ್ತು ಚಾಸಾಃ 1 ರವರಿಗೆ ಸಹಾಯ ಮಾಡುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಈ ಪ್ರಕರಣದ ಚಾಸಾಃ 1 ರವರೊಂದಿಗೆ ವಿಶ್ವಾಸದಿಂದ ಇರುವುದರಿಂದ ಹಾಗೂ ಆರೋಪಿತರೊಂದಿಗೆ ವಿಶ್ವಾಸದಿಂದ ಇಲ್ಲದೇ ಇರುವುದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ಈ ಪ್ರಕರಣದ ಚಾಸಾಃ1 ರವರ ಹೇಳಿಕೆಯ ಮೇರೆಗೆ ಮತ್ತು ಅವರು ಹೇಳಿಕೊಟ್ಟ ಪ್ರಕಾರ ನಾನು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮು.ಮಾ.1 ರಿಂದ ಮು.ಮಾ.4 ಕ್ಕೂ ಮತ್ತು ಆರೋಪಿತರಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ವಕೀಲರು ಗೈರು ಹಾಜರಾಗಿದ್ದು, ಆ ಕಾರಣ 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.